ನಮ್ಮ್ ಪೂರ್ವಿಕರು ಮಗ. ನೀ ಎಂತ ಮಾಡುತ್ ಇದ್?' ಎಂದು ಗಾಬರಿಪಟ್ಟರೆ, 'ಅದೆಲ್ಲ ನಿನ್ನ್ ಗೊಡ್ಡು ಆಚಾರ ಕಟ್ಟಿಡ್ ಅತ್ಲಾಯಿ ಅಮ್ಮಾ. ಹೀಂಗ್ ಮಾಡ್ಕಂಡೇ ನಮ್ಮವ್ರು ಹಾಳಾದ್ದು. ಮರ ಕಡಿಯೂಕಾಗ, ಹೊಲ ಉಳೂಕಾಗ, ಸಮುದ್ರ ದಾಟೂಕಾಗ. ನೀ ಎಲ್ಲಿದ್ದೀ? ನಿಮ್ಮ್ ಎಲ್ರ ಸುಖಕ್ಕೇ ನಾ ಮಾಡುತ್ ಅಲ್ದ?' ಎಂದು ಬಾಯಿ ಮುಚ್ಚಿಸುತ್ತಿದ್ದ.

ಊರಲ್ಲಿ ಜನ ಒಂದಕ್ಕೊಂದು ಮಾತಾಡಿದರು. ತನ್ನ ಜಾಗದ ಮರಗಳನ್ನು ಮಾತ್ರವಲ್ಲ ಬದಿಯ ಸರಕಾರೀ ಜಮೀನಿನ ಮರಗಳನ್ನೂ ಮಾರುತ್ತಿದ್ದಾನೆಂಬ ಸುದ್ದಿಯೂ ಹಬ್ಬಿತ್ತು. 'ಇಪ್ಪತ್ತಕ್ ಯಜಮಾನ್ಕಿ ಸಿಕ್ಕುಕಾಗ ಅಂತ್ ಹೇಳೂದ್ ಸುಳ್ಳಾ ಮತ್ತೆ?' ಎಂದವರೂ ಇದ್ದರು. ತಾನು ಕಡಿದು ಕಳಿಸುವ ಮರಗಳನ್ನು ಸಾಗಿಸುವವರ ಲಾಭವು ತಾನು ಅವನ್ನು ಮಾರಿ ತನಗೆ ಸಿಕ್ಕುವ ಹಣಕ್ಕಿಂತ ಜಾಸ್ತಿ ಎಂದು ಮನವರಿಕೆಯಾಗಿ, ಅವನು ಲಾರಿ, ಟ್ರಕ್ಕುಗಳ ಗುತ್ತಿಗೆಯನ್ನು ತೆಗೆದುಕೊಳ್ಳಲು ಸುರುಮಾಡಿದ. ಮರದ ದಿಮ್ಮಿಗಳನ್ನು ಮಾತ್ರವಲ್ಲದೆ, ಅಕ್ಕಿ, ನೀರುಳ್ಳಿ ಮುಂತಾದ ಅವಶ್ಯ ವಸ್ತುಗಳನ್ನೂ ಕಡಿಮೆ ಬೆಲೆಯಿದ್ದಲ್ಲಿಂದ ಹೆಚ್ಚು ಬೆಲೆ ಇರುವ ರಾಜ್ಯಗಳಿಗೆ ರವಾನಿಸತೊಡಗಿದ್ದ. ಆದರೆ ಇವೆಲ್ಲದರ ಎಡೆಯಲ್ಲೂ ಮೂಲತಃ ತಾನೊಬ್ಬ ಕ್ರಾಂತಿಕಾರಿ ಎನ್ನುವುದನ್ನು ಎಲ್ಲೋ ಅವನ ಒಳದನಿಯೊಂದು ಹೇಳುತ್ತಲೇ ಇರುತ್ತಿತ್ತು. ಆದರೆ ಕ್ರಾಂತಿ ಈಗಲ್ಲ, ಮತ್ತೊಂದು ದಿವಸಕ್ಕೆ ಎಂದು ಅವನ ಮನಸ್ಸು ಅದನ್ನು ಬದಿಗೊತ್ತುತ್ತಲೇ ಇರುತ್ತಿತ್ತು.

ನೋಡುನೋಡುತ್ತ ಬಾಡಿಗೆ ಮನೆಯಿಂದ ಸ್ವಂತ ಮನೆಗೆ ಬಂದಾಗಿತ್ತು. ತಮ್ಮ-ತಂಗಿಯರ ವಿದ್ಯಾಭ್ಯಾಸಕ್ಕೂ, ತನ್ನ ಕಾರುಬಾರುಗಳಿಗೂ, ಅನುಕೂಲವೆಂದು ಉಡುಪಿಯಲ್ಲೇ ಜಾಗ ತೆಗೆದುಕೊಂಡು ವಿಶಾಲವಾದ ಎರಡುಪ್ಪರಿಗೆಯ ಮನೆಯನ್ನು ಕಟ್ಟಿಸಿದ. ಅದೇ ಸಮಯದಲ್ಲಿ ಅವನು ಸಿಮೆಂಟು ಮತ್ತು ಮರಳಿನ ವ್ಯಾಪಾರಕ್ಕೂ ಇಳಿದಿದ್ದ. ಆ ವಲಯದಲ್ಲಿ ಅವನ ಪ್ರಭಾವ ಎಷ್ಟರ ಮಟ್ಟಿಗೆ ಬೆಳೆಯಿತೆಂದರೆ ಎಷ್ಟೇ ಸಿಮೆಂಟಿನ ಅಭಾವವಿದ್ದರೂ, ಅವನ ಗಿರಾಕಿಗಳಿಗೆ ಏನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದ. ಪಾರ್ಥ ಹಂತಹಂತವಾಗಿ ಮೇಲೇರುತ್ತ ಬಂದಂತೆ ಜನರ ವರ್ತನೆಯೂ ಸಹ ಬದಲಾಗತೊಡಗಿತು. ಪೂಜೆ-ಪುನಸ್ಕಾರಗಳಿಗೆ, ದೇವಳಗಳ ಉತ್ಸವಗಳಿಗೆ ದೇಣಿಗೆ ಕೇಳಲು ಬರತೊಡಗಿದರು; ಸಭೆ, ಸಮಾರಂಭ, ವಾರ್ಷಿಕೋತ್ಸವಗಳಿಗೆ ಮುಖ್ಯ ಅತಿಥಿಯಾಗಿ ಕರೆಯತೊಡಗಿದರು.

ಅವನ ವ್ಯವಹಾರ ನಿಪುಣತೆ, ಕಾರ್ಯ ಚತುರತೆಗಳನ್ನು ಈಗ ಎಲ್ಲರೂ ಹೊಗಳುವವರೇ. ಮರಳಿನ ವ್ಯಾಪಾರವೂ ಭರದಿಂದ ಸಾಗುತ್ತಿತ್ತು. ಅವನ ಜಿಲ್ಲೆಗೆ ಮಾತ್ರವಲ್ಲ, ಮರಳಿನ ಕೊರತೆಯಿರುವ ಬೇರೆ ಜಿಲ್ಲೆಗಳಿಗೂ ಅವನ ಕಂಪೆನಿಯ ಮರಳು ಸಾಗಿಸಲ್ಪಡುತ್ತಿತ್ತು. ಈ ನಡುವೆ ತಂಗಿಯ ಮದುವೆಯನ್ನೂ ಬೆಂಗಳೂರಿನ ಡಾಕ್ಟರೊಬ್ಬರೊಡನೆ ನಿಶ್ಚಯಿಸಿ, ವಿಜೃಂಭಣೆಯಿಂದ ಮಾಡಿ ಮುಗಿಸಿದ್ದ. ಅವನ ಮದುವೆಯೂ ಪುತ್ತೂರಿನ ಚಿನ್ನದ ವ್ಯಾಪಾರಿಯೊಬ್ಬರ ಮಗಳೊಡನೆ ವೈಭವದಿಂದ ಜರಗಿತ್ತು. ಬದುಕಿನುದ್ದಕ್ಕೂ ಕಷ್ಟಗಳ ಮೇಲೆ ಕಷ್ಟಗಳನ್ನೇ ಅನುಭವಿಸಿದ ಅವನ ಅಮ್ಮನಿಗೆ ಈಗ ಆರಾಮವೆನಿಸಿತ್ತು. ಆಕೆಯ ಬೇಕುಬೇಡಗಳನ್ನು ನೋಡಿಕೊಳ್ಳಲು ಪಾರ್ಥ ಕಾಲತುದಿಯಲ್ಲಿ ಕಾಯುತ್ತಿರುತ್ತಿದ್ದ. ಏನಾದರೊಂದು ಮಾತು ಆಕೆಯ ಬಾಯಿಯಿಂದ ಬರುವುದು ತಡ, ಅವನು ಅದನ್ನು ಪೂರೈಸಿಬಿಡುತ್ತಿದ್ದ.

ಈಗ ಬೆಂಗಳೂರಿನ ಹೋಟೇಲಿನಲ್ಲಿ ಸುರೇಶನೊಂದಿಗೆ ವ್ಹಿಸ್ಕಿ ಕುಡಿಯುತ್ತಾ ಕುಳಿತಿದ್ದಾಗ, ಮಾತು ಪಾರ್ಥನ ಸಾರಿಗೆ ವ್ಯವಹಾರದತ್ತ ತಿರುಗಿತು.

'ನಿನ್ನ ಟ್ರಾನ್ಸ್‌ಪೋರ್ಟ್ ಬಿಸಿನೆಸ್ ಹೇಗುಂಟು?' ಎಂದು ಸುರೇಶನೇ ಕೇಳಿದ. ಡೀಸೆಲ್ ದರ ಹೆಚ್ಚಳ, ಡ್ರೈವರುಗಳ ಏರುತ್ತಿರುವ ಸಂಬಳ, ಲಾರಿಗಳ ದುರಸ್ತಿ, ಬ್ಯಾಂಕಿನ ಬಡ್ಡಿಯ ಏರಿಕೆಗಳ ವಿಷಯ ಮಾತಾಡತೊಡಗಿದರು.

'....ತಲೆಬಿಸಿ ಸ್ವಲ್ಪ ಇಲ್ಲ ಮಾರಾಯ. ಸಾಕಾಗಿ ಹೋಗಿದೆ. ಈ ಸರಕಾರದವರೂ ನೋಡು, ಹೊಸ ಹೊಸ ಕಾನೂನು....' ಎಂದು ವಿವರಿಸುತ್ತ,